ಅ) ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯು ವಿಸ್ತರಣೆ ಹೊಂದಿದ ಮೇಲೆ ಆಗುವ ಕಬ್ಬಿನ ಅರೆಯುವ ಸಾಮರ್ಥ್ಯ,

ಇ) ಪರವಾನಗಿ ಅವಧಿಯು ಶೀಘ್ರದಲ್ಲಿ ಮುಗಿಯುವುದರಲ್ಲಿರುವುದರಿಂದ ವಿಸ್ತರಣಾ ಕಾರ್ಯ ಕ್ರಮವನ್ನು ಜಾರಿಗೊಳಿಸುವುದರಲ್ಲಿ ತೆಗೆದುಕೊಂಡ ಕ್ರಮಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಸಚಿವರು).—

ಅ) ಬೀದರ್ ಜಿಲ್ಲೆಯಲ್ಲಿ ಕಬ್ಬು ಬೆಳೆಯುವ ವಿಸ್ತೀರ್ಣ ಈ ಕೆಳಗಿನಂತಿದೆ.—

	ತಾಲ್ಲೂಕು	ಕಬ್ಬು ಬೆಳೆಯುವ ಕ್ಷೇತ್ರದ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)
೧.	ಬೀದರ್	೫೬೭೦
೨.	ಭಾಲ್ಕಿ	೨೧೪೦
೩.	ಬಸವ ಕಲ್ಯಾಣ	೩೯೫೫
೪.	ಔರಾದ್	೫೨೦
೫.	ಹುಮ್ನಾಬಾದ್	೫೮೫೫
	ಒಟ್ಟು	೧೭೧೬೦

ಆ) ದಿನ ಒಂದಕ್ಕೆ ೩.೫೦ ಮೆಟ್ರಿಕ್ ಟನ್ ಕಬ್ಬು ಅರೆಯುವ ಸಾಮರ್ಥ್ಯ ಪಡೆಯುತ್ತದೆ.

ಇ) ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಡಾ. ವಿಜಯಕುಮಾರ್ ಖಂಡ್ರೆ.— ಮಾನ್ಯ ಅಧ್ಯಕ್ಷರೇ, ನಾನು ಏನು ಕೇಳಬೇಕೆಂದಿದ್ದೇನೆ ಅಂದರೆ ಇದುವರೆಗೆ ಎಕ್ಸ್‌ಪ್ಯಾನ್‌ಷನ್ ಕೆಲಸ ಏನು ಮುಂದುವರೆಯಬೇಕಾಗಿತ್ತೋ ಅದು ಇದುವರೆಗೂ ಏತಕ್ಕೆ ಆಗಿಲ್ಲ? ಇದು ಬೇಗ ಆಗುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀಮತಿ ಮನೋರಮ ಮಧ್ವರಾಜ್.— ಮಾನ್ಯ ಸಭಾಧ್ಯಕ್ಷರೆ, ಈ ಸಕ್ಕರೆ ಕಾರ್ಖಾನೆಗೆ ಷುಗರ್ ಡೆವಲಪ್‌ಮೆಂಟ್ ಫಂಡ್ ಲೋನ್ ೩೬೫.೮೦ ಲಕ್ಷ ರೂಪಾಯಿ ಸಿಗಬೇಕು. ಎನ್‌ಸಿಡಿಸಿಯಿಂದ ಲೋನ್ ಅಸಿಸ್ಟೆನ್ಸ್ ೭೩೦.೨ ಲಕ್ಷ ರೂಪಾಯಿ ಸಿಗಬೇಕು. ಇದರಲ್ಲಿ ಏನಾಗಿದೆ ಎಂದರೆ ಫ್ಯಾಕ್ಟರಿಯಿಂದ ಕಾಂಟ್ರಿಬ್ಯೂಷನ್ ೩೬೪.೧೮ ಲಕ್ಷ ರೂಪಾಯಿ ಬಂದರೆ ಕೂಡಲೇ ನಾವು ಗ್ಯಾರಂಟಿ ನಿಂತು ಶೀಘ್ರವಾಗಿ ಅಲ್ಲಿ ಕೆಲಸ ಪ್ರಾರಂಭ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಡಾ. ವಿಜಯಕುಮಾರ್ ಖಂಡ್ರೆ.— ಒಂದು ಸಲಹೆ ಕೊಡುತ್ತೇನೆ.

ಅಧ್ಯಕ್ಷರು.— ನೀವು ಸಲಹೆ ಕೊಡುವುದು ಬೇಡ. ಉತ್ತರ ತೆಗೆದುಕೊಳ್ಳಬೇಕು. ಡಿಮ್ಯಾಂಡ್ಸ್ ಬಂದಾಗ ಸಲಹೆ ಕೊಡಿ. ಈಗ ಮಾನ್ಯ ಶಿವರಾಮೇಗೌಡರು ತಮ್ಮ ಪ್ರಶ್ನೆ ಕೇಳಲಿ.

ನಾಗಮಂಗಲ ತಾಲ್ಲೂಕಿನಲ್ಲಿರುವ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ

೭೦. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ).— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ಪಶು ಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನಲ್ಲಿ ಕಣ್ವ ನೀರಾವರಿ ಮತ್ತು ಎನ್.ಆರ್.ಡಬ್ಲ್ಯೂ.ಎಸ್. ಯೋಜನೆಗಳ ಅಡಿಯಲ್ಲಿ ಈಗಾಗಲೇ ಕೈಗೆತ್ತಿಕೊಳ್ಳಲಾಗಿರುವ ಯೋಜನೆಗಳು ಎಷ್ಟು?

ಆ) ನಾಗಮಂಗಲ ತಾಲ್ಲೂಕಿನಲ್ಲಿ ೧೯೯೦-೯೧ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವ ಹೊಸ ಯೋಜನೆಗಳು ಎಷ್ಟು?

ಇ) ಮೇಲ್ಕಂಡ ಯೋಜನೆಗಳನ್ನು ಯಾವ ಯಾವ ಗ್ರಾಮಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಶುಸಂಗೋಪನ ಮಂತ್ರಿಗಳು).—

ಅ) ನಾಗಮಂಗಲ ತಾಲ್ಲೂಕಿನಲ್ಲಿ ಇದುವರೆವಿಗೆ ೨೪ ಕಿರು ನೀರು ಸರಬರಾಜು ಯೋಜನೆಗಳನ್ನು ೯ ಎನ್.ಆರ್.ಡಬ್ಲ್ಯೂ.ಎಸ್ ಯೋಜನೆಗಳನ್ನು ಮತ್ತು ೩ ಎಆರ್.ಡಬ್ಲ್ಯೂ.ಎಸ್ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ೧೯೯೦-೯೧ರ ಸಾಲಿನ ಅನುಬಂಧ-೨ ಮತ್ತು ಕ್ರಿಯಾ ಯೋಜನೆಗಳು ತಯಾರಿಕೆಯ ಹಂತದಲ್ಲಿ ಇದ್ದು ಅನುಬಂಧ-೨ ಯನ್ನು ಸದನದಲ್ಲಿ ಮಂಡಿಸಲಾಗುವುದು.

ಇ) ೧೯೯೦-೯೧ರ ಸಾಲಿನ ಅನುಬಂಧ-೨ ಮತ್ತು ಕ್ರಿಯಾ ಯೋಜನೆ ಮಂಜೂರಾದ ಮೇಲೆ ಗ್ರಾಮಗಳ ವಿವರಗಳನ್ನು ತಿಳಿಸಲಾಗುವುದು.

ಶ್ರೀ ಎಲ್.ಆರ್. ಶಿವರಾಮೇಗೌಡ.— ಮಾನ್ಯ ಸಭಾಧ್ಯಕ್ಷರೇ, ಈಗ ಸಚಿವರು ತಿಳಿಸಿದ ಹಾಗೆ ನಮ್ಮ ತಾಲ್ಲೂಕಿನಲ್ಲಿ ಇದುವರೆಗೆ ೨೪ ಕಿರು ನೀರು ಸರಬರಾಜು ಯೋಜನೆಗಳನ್ನು ೯ ಎನ್.ಆರ್.ಡಬ್ಲ್ಯೂ.ಎಸ್. ಯೋಜನೆಗಳನ್ನು ಮತ್ತು ೩ ಎ.ಆರ್.ಡಬ್ಲ್ಯೂ.ಎಸ್. ಯೋಜನೆಗಳನ್ನು ಕೈಗೆತ್ತಿಕೊಂಡಿದ್ದಾರೆ. ೪೯೬ ಹಳ್ಳಿಗಳು ಇರತಕ್ಕ ನನ್ನ ತಾಲ್ಲೂಕಿನಲ್ಲಿ ಕೇವಲ ೩೩ ಹಳ್ಳಿಗಳಿಗೆ ನೀರು ಒದಗಿಸಿದರೆ ಇನ್ನು ೨ ಸಾವಿರ ಇಸವಿಯಾದರೂ ಉಳಿದ ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ದಕ್ಕಾಗುವುದಿಲ್ಲ. ಗ್ರಾಮೀಣಾಭಿವೃದ್ಧಿ ಸಚಿವರು ನಮ್ಮ ಜಿಲ್ಲೆಗೆ ಬಂದಿದ್ದಾಗ ಕಿರು ನೀರು ಸರಬರಾಜು ಯೋಜನೆ ಗ್ರಾಮಾಂತರ ನೀರು ಸರಬರಾಜು ಯೋಜನೆ ಬಗ್ಗೆ ರಾಜ್ಯ ಸರ್ಕಾರದಲ್ಲಿ ಏನು ನಾವು ನ ಇವೆ ತಿಳಿಸಿ ಅದಲಾವಣೆ ಮಾಡಬೇಕು ಎಂದು ಕೇಳಿದ್ದೆವು. ಜನಸಂಖ್ಯೆ ಆಧಾರದ ಮೇಲೆ ಈ ಕೆಲಸ ಮಾಡತಕ್ಕದು ಏನಾದರೂ ಪರಿಶೀಲನೆಯಲ್ಲಿದೆಯೇ?

ಶ್ರೀ ಬಿ. ಬಸವಲಿಂಗಪ್ಪ — ಮುಂದಿನ ವರ್ಷ ಈ ಯೋಜನೆ ಪ್ರಕಾರ ನಿಮ್ಮ ಕ್ಷೇತ್ರಕ್ಕೆ ಎಷ್ಟು ಅವಶ್ಯಕತೆ ಇದೆ ಎಂಬುದನ್ನು ಪರಿಶೀಲನೆ ಮಾಡಿ ಮಂಜೂರು ಮಾಡೋಣ.

ಶ್ರೀ ಎಲ್. ಆರ್. ಶಿವರಾಮೇಗೌಡ.— ನನ್ನ ತಾಲ್ಲೂಕಿನಲ್ಲಿ...

ಅಧ್ಯಕ್ಷರು.— ಅದು ಅಷ್ಟು ಪ್ರಾಮುಖ್ಯವಾದ ವಿಚಾರವಾದರೆ, ನೀವು ಶೂನ್ಯ ನಿಯಮದ ಪ್ರಕಾರ ಅರ್ಧ ಗಂಟೆ ಚರ್ಚೆಗೆ ಸೂಚನೆ ಕಳುಹಿಸಿಕೊಡಿ.

ಹಾಸನ ಜಿಲ್ಲೆಯ ಶಾಂತಿಗ್ರಾಮ ಪಶುವೈದ್ಯ ಸಹಾಯಕ ಶಸ್ತ್ರ ಚಿಕಿತ್ಸಕ ಹುದ್ದೆಯ ಸ್ಥಳಾಂತರ

೮೨. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).— ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ತಾಲ್ಲೂಕಿನ ಶಾಂತಿ ಗ್ರಾಮದ ಪಶುವೈದ್ಯ ಶಾಲೆಗೆ ಮಂಜೂರಾಗಿರುವ ವೆಟರಿನರಿ ಅಸಿಸ್ಟೆಂಟ್ ಸರ್ಜನ್ ಹುದ್ದೆಯನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸಲು ಕಾರಣಗಳೇನು?

ಆ) ಇದರಿಂದ ಶಾಂತಿ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳ ರೈತರುಗಳಿಗೆ ಹಾಗೂ ಜಾನುವಾರುಗಳಿಗೆ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ಪಶುಸಂಗೋಪನಾ ಸಚಿವರು).—

ಅ) ಸರ್ಕಾರಿ ಆದೇಶ ಸಂಖ್ಯೆ. ಎಫ್‌ಡಿ ೫೫ ಬಿಜಿಎಲ್ ೮೪ ದಿನಾಂಕ ೧೩-೧೨-೮೪ರಲ್ಲಿರುವಂತೆ ಇಲಾಖೆಯ ಯೋಜನೆ, ಯೋಜನೇತರ ಹುದ್ದೆಗಳ ಹೊಂದಾಣಿಕೆ ಸಂದರ್ಭದಲ್ಲಿ ಶಾಂತಿಗ್ರಾಮ ಪಶುವೈದ್ಯ ಶಾಲೆಯ ಪಶುವೈದ್ಯರ ಹುದ್ದೆಯನ್ನು ಸ್ಥಳಾಂತರಿಸಲಾಗಿದೆ.

ಆ) ಬಂದಿದೆ.